SMT. E. E. VAZ —I would like to tell my hon. friend that it is the desire of the Governments-both Central and State to bring down the prices by opening Fair Price Shops.

ಶ್ರೀ ಟಿ ಎಂ. ಮಂಜುನಾಥ್ —ಸರ್ಕಾರದವರು ಈ ಆಹಾರವಸ್ತುಗಳನ್ನು ಯಾವ ನೀತಿಗೆ ಅನುಸರಿಸಿ ಸರಬರಾಯಿ ಮಾಡುತ್ತಿದ್ದಾರೆ ? 100 ಜನರು ಇರತಕ್ಕ ಹಳ್ಳಿಗೆ 70 ಚೀಲ ಸಕ್ಕರೆ ಸಪ್ಲೈ ಮಾಡಿದರೆ ಎರಡೂವರೆ ಸಾವಿರ ಜನಸಂಖ್ಯೆ ಇರತಕ್ಕಂಥ ಒಂದು ದೊಡ್ಡ ಗ್ರಾಮಕ್ಕೆ ಒಂದು ಚೀಲ ಸಕ್ಕರೆ ಕೊಡುತ್ತಿದ್ದಾರೆ. ಈ ತಾರತಮ್ಯವೇಕೆ ?

ಶ್ರೀ ಮತಿ ಇ. ಇ. ವಾಜ್ —ಬೆಂಗಳೂರು ಮತ್ತು ಕೆ. ಜಿ ಎಫ್ ಈ ಎರಡು ಕಡೆ ಇರತಕ್ಕವರಿಗೆ ತಲಾ ಒಂದು ತಿಂಗಳಿಗೆ ಒಂದೊಂದು ಕೆ. ಜಿ ಪ್ರಕಾರ ಕೊಡಲಾಗುತ್ತದೆ. ಇನ್ನು ಬೇರೆ ಕಡೆ ಇರತಕ್ಕವರಿಗೆ ತಿಂಗಳಿಗೆ ತಲಾ ೭೫ ಗ್ರಾಂ ಕೊಡಲಾಗುತ್ತದೆ. ಆದರೆ ಕೆಲವು ಹಳ್ಳಿಗಳಲ್ಲಿ ಜನರು ಸಕ್ಕರೆಯನ್ನು ಹೆಚ್ಚು ಉಪಯೋಗ ಮಾಡುವುದಿಲ್ಲ. ಅವರು ಹೆಚ್ಚಿಗೆ ಬೆಲ್ಲವನ್ನೇ ಉಪಯೋಗ ಮಾಡುತ್ತಿರುವುದರಿಂದ ಕೆಲವು ಗ್ರಾಮಗಳಿಗೆ ಹೆಚ್ಚಿಗೆ ಸಕ್ಕರೆ ಬೇಕಾಗದೆ ಇರಬಹುದು.

ಶ್ರೀ ಎಸ್. ಎಸ್ ಪುಟ್ಟಿರಂಗನಾಥ್ —ಧಾರಣಿವಾಪಿಗಳನ್ನು ಪರದಂತೆ ತೆಡೆಗಟ್ಟುವುದ್ಯಾಗಿ ಸರ್ಕಾರದವರು ೨—೩ ಕಡೆ ರೈಡ್ ಮಾಡಿದರಲ್ಲಾ ಅದರ್ಯಿಂದ ಏನಾದರೂ ಪ್ರಯೋಜನ ಆಗುತಾಯಿತೇ ?

ಶ್ರೀ ಮತಿ ಇ ಇ ವಾಜ್ —ಬಿ.ಡಿಶಾ ಪ್ರಯೋಜವಾಗಿದೆ ಬ್ಲಾಕ್ ಮಾರ್ಕೆಟ್ ಮಾಡುವುದು ತಪ್ಪಿ ಹೋಗಿದೆ. ಈಗ ಎಲ್ಲಾ ಅಂಗಡಿಗಳಲ್ಲೂ ಪ್ರೈಜ್ ಲಿಸ್ಟ್‌ನು ಎಗ್ಜಿಬಿಟ್ ಮಾಡುತ್ತಿದ್ದಾರೆ.
ಶ್ರೀ ಟಿ ಆರ್. ಶಾಮಣ್ಣ —ಬೆಂಗಳೂರು ನಗರದಲ್ಲಿ ತಲಾ ಒಂದಕ್ಕೆ ಒಂದು ಕಾರ್ಡಿಗೆ ಆಕ್ಕಿ, ಸಕ್ಕರೆ ಮತ್ತು ಗೋಧಿ ಇವುಗಳನ್ನು ಎಚ್ಚು ಕೊಡುತ್ತೀರಿ ?ನಗರದಲ್ಲಿ ಈ ಆಹಾರ ಪರಿಸ್ಥಿತಿ ಬಹಳ ಕಠಿಣವಾಗಿರುವುದರಿಂದ ನಾನು ಇಲ್ಲಿ ಚರ್ಚೆ ಮಾಡ ವುದಕ್ಕೆ 59ನೆ ರೂಲ್ ಪ್ರಕಾರ ಒಂದು ಮೋಷನ್ ಕಳುಹಿಸಿದ್ದೇನೆ ಅವಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಾ?

ಅಧ್ಯಕ್ಷರು —ನಾನು ಈ ಒಂದು ಪ್ರಶ್ನೆಗೆ 20 ನಿಮಿಷಗಳ ಅವಕಾಶವನ್ನು ಕೊಟ್ಟಿದ್ದರೂ ತಾವು ಮಂತ್ರಿ ಪ್ರತ್ಯೇಕ ಚರ್ಚೆಗೆ ಅಕಾಶ ಕೇಳಿಂವುದು ಸರಿಯೇ? ಅದಕ್ಕೆ ಯಾರು ಅವಕಾಶ ಕೊಡತಕ್ಕವರು ?

ಶ್ರೀ ಮತಿ ಇ ಇ. ವಾಜ್ —ನಗರದಲ್ಲಿ ಒಂದು ಕಾರ್ಡಿಗೆ ತಲಾ ಆಕ್ಕಿ ಎರಡು ಕೆ. ಜಿ. ಮತ್ತು ಗೋಧಿಳಿ ಕೆ ಜಿ. ಮತ್ತು ಇತರೇ ವಿಶೇಷ ಸಂದರ್ಭಗಳಿಗಾಗಿ ೨ಕೆ ಜಿ. ಆಕ್ಕಿ ಹೀಗೆ ಒಟ್ಟು ಎಂಟು ಕೆ.ಜಿ. ದವಸವನ್ನು ಕೊಡಲಾಗುತ್ತಿದೆ

ಶ್ರೀ ಎಂ. ಎಸ್. ಕೃಷ್ಣನ್ —ಇಲ್ಲಿ ತಾವು ಕೊಟ್ಟಿರತಕ್ಕ ಉತ್ತರದಲ್ಲಿ ಹೇಳಿರುವಂತೆ ೧೯೬೨ನೇ ಫೆಬ್ರುವರಿಯಿಂದ ಬೆಂಗಳೂರು ನಗರದಲ್ಲಿ ಸಕ್ಕರೆ ಬೆಲೆ ಶೇ —೩೬ಭಾಗದಷ್ಟು ಜಾಸ್ತಿಯಾಗಿದೆ ಬೇರೆ ಕಡೆಗಳಲ್ಲಿ ಶೇ ೩೫ ರಷ್ಟು ಜಾಸ್ತಿಯಾಗಿದೆ ಎಂದು ಹೇಳಲಾಗಿದೆ. ಹಾಲಿ ನ್ಯಾಯಬೆಲೆಯ ಅಂಗಡಿಗಳಲ್ಲಿ ಸಕ್ಕರೆ ಬೆಲೆ ವಿಪರೀತ ಚೆಲ್ಲರೆ ಇದ್ದರೆ,ಹೊರಗಡೆ ಬಜಾರಿನಲ್ಲಿ ಕೆ. ಜಿ.ಒಂದಕ್ಕೆ 4ರೂಪಾಯಿಮಾರಟ ಮಾಡಲಾಗುತಿದೆ ಆದ್ದರಿಂದ ಇದನ್ನು ರಾಷ್ಟ್ರೀಕರಣ ಗೊಳಿಸುವುಕ್ಕಾಗುವುದಿಲ್ಲವೇ ?

ಅಧ್ಯಕ್ಷರು —ಆ ಪ್ರಶ್ನೆ ಇಲ್ಲಿ ಹೇಗೆ ಉದ್ಭವವಾಗುತ್ತದೆ ?

1-30 P.M.

DAMAGE TO PADDY IN SOUTH KANARA DISTRICT

270. SRI A. G KODGI (Baindur).—

Will the Minister for Agriculture and Forests be pleased to state :—

(a) whether it is a fact that the paddy first crop is badly damaged in S. K. District owing to disease to the seedlings and due to late monsoon ;

(*b*) if so, the step taken by the Government to provide assistance to the farmers of the District ?

SRI K. H. PATIL (Minister for Agriculture and Forests) —

(*a*) Dry Paddy nurseries sown in the months of April and May have been damaged due to the combined effect of mealy bug pest attack and failure of South-West monsoon.

However, the dry nurseries treated with Phorate 10 per cent G and wet nurseries sown in June, have escaped the insect damage. Besides, the damage is negligible in the areas where previous crop had been treated with Phorate.

(*b*) 1. Use of Phorate 10 per cent G has been found effective in the control of mealy bug. The farmers have been advised to use Phorate both in nursery stage and the main fields.

2. Taluk Boards concerned and the Co-operative societies have been encouraged to stock this chemical and sell it to farmers.

The T. D. B. Bantwal and some village Panchayat have distributed Phorate free of cost as well as at 50 per cent subsidised cost.

3. Some farmers have also purchased this chemical from co-operative societies at full cost and used it for the control of the pest.

4. Arrangements have been made to distribute short-duration paddy varieties to take up re-sowing wherever possible. Farmers have decided to take up a second crop wherever irrigation facilities are available.

5. The agro Industries Corporation has been advised to stock the necessary pesticides in the various places in the district well in time so that farmers can easily get their requirements.

6. Government has sanctioned a scheme at a cost of Rs. 21,12,800 for the control of mealy bug on paddy over an area of 8000 Hectares, and 18 villages of Belthangadi, Puttur, Bantwal, Mangalore and Sullia Taluks have been notified as pest-effected area.

ಶ್ರೀ ಎ. ಜಿ. ಕೊಡಗಿ:—(ಅ) ಪ್ರಶ್ನೆಗೆ ಉತ್ತರವಾಗಿ ಒಂದು ಕಡೆ 'ಹಾನಿಯಾಗಿದೆ' ಎಂದು ಹೇಳಿದೆ. ಇನ್ನೊಂದು ಕಡೆಯಲ್ಲಿ ಅದೇ ಉತ್ತರದಲ್ಲಿ 'ಹಾನಿಯಾಗಿಲ್ಲ' ಎಂದು ಹೇಳಿದೆ. ಈ ಜಿಲ್ಲೆಯಲ್ಲಿ ಮೊದಲನೆ ಬೆಳೆಗೆ ಒಟ್ಟು ಹಾನಿ ಎಷ್ಟು?

† ಶ್ರೀ ಕೆ ಎಚ್. ಪಾಟೀಲ್:—ಸರ್ಕಾರಕ್ಕೆ ಬಂದ ವರದಿ ಪ್ರಕಾರ ಹಾನಿ 'ವೆರಿ ನೆಗ್ಲಿಜಬಲ್' ಎಂದು ಹೇಳಿದ್ದೇವೆ.

ಶ್ರೀ ಎ. ಜಿ. ಕೊಡಗಿ. ನಾನು ಸ್ಪೆಸಿಫಿಕ್ಕಾಗಿ ಒಂದು ಪ್ರಶ್ನೆಯನ್ನು ಕೇಳಿದೆ. ಈ ಜಿಲ್ಲೆಯಲ್ಲಿ ಮೊದಲನೆ ಬೆಳೆಗೆ ಒಟ್ಟು ಹಾನಿ ಎಷ್ಟು?

ಶ್ರೀ ಕೆ. ಎಚ್. ಪಾಟೀಲ್:—ನಾನು ಅದನ್ನು ಅಂದಾಜು ಮಾಡಲಿಕ್ಕೆ ಅವಶ್ಯಕವಿಲ್ಲದಷ್ಟು ಹಾನಿಯಾಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ:—(ಅ) ಪ್ರಶ್ನೆಗೆ ಉತ್ತರವಾಗಿ (೬)ನೇ ಐಟಂನಲ್ಲಿ ಈ ಹಾನಿಯನ್ನು ತಪ್ಪಿಸಲು ಸುಮಾರು ೨೧ ಲಕ್ಷ ಚಿಲ್ಲರೆ ರೂಪಾಯಿಗಳ ಮೆಚ್ಚದ ಯೋಜನೆಯೊಂದನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆಂದು ಹೇಳಿದೆ. (ಅ) ಪ್ರಶ್ನೆಗೆ ಉತ್ತರವಾಗಿ ಕೊನೆಯಲ್ಲಿ ಹಾನಿ ಸಂಭವಿಸಿಲ್ಲವೆಂದು ಹೇಳಿದೆ. ಆದಮೇಲೆ ಈಗ ಏತಕ್ಕಾಗಿ ಈ ಒಂದು ಯೋಜನೆಯನ್ನು ತಯಾರುಮಾಡಿದ್ದೀರಿ? ಇಂತಹ ಯೋಜನೆಯಿಂದ ರೈತರಿಗೆ ಸಿಗುವ ಪ್ರಯೋಜನವೇನು ?

ಶ್ರೀ ಕೆ. ಎಚ್. ಪಾಟೀಲ್:—ಮಾನ್ಯ ಸದಸ್ಯರು ಗಮನಿಸಬೇಕು. ಹಾನಿಯಾದರೆ ಮಾತ್ರ ಯೋಜನೆ ಮಾಡಬೇಕೆಂದಲ್ಲ. ಮುಂದೆ ಹಾನಿಯಾಗದೇ ಇರಲಿ ಎಂದು ಸರ್ಕಾರ ಈ ಯೋಜನೆ ಮಾಡಿದೆ. ಈ ಯೋಜನೆಯ ಮುಖಾಂತರ ರೈತರಿಗೆ ಅನೇಕರಿಗೆ ನಾನಾ ಸವಲತ್ತುಗಳನ್ನು ಕೊಟ್ಟಿದೆ. ಇದರಿಂದ ಅನೇಕರಿಗೆ ಉಪಯೋಗವಾಗಿದೆ. ಆದರೂ ಅಲ್ಲಿ ಆಗತಕ್ಕ ಹಾನಿ ತಪ್ಪಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ:—ಈ ಯೋಜನೆಯಿಂದ ರೈತರಿಗೆ ಸಿಗುವ ಸೌಲಭ್ಯಗಳಾದರೂ ಏನು ?

ಶ್ರೀ ಕೆ. ಎಚ್. ಪಾಟೀಲ್:—'ಮಿಲಿಬಗ್' ಹಾವಳಿಯನ್ನು ಕಂಟ್ರೋಲ್ ಮಾಡುವುದಕ್ಕೆ ಬೇಸಾಯಗಾರರಿಗೆ ತಕ್ಕ ಔಷಧಿಗಳನ್ನು ಅಗ್ರಿಕಲ್‌ಚರಲ್ ಇಂಡಸ್ಟ್ರೀಸ್ ಮುಖಾಂತರ ಹಾಗೂ ಅಗ್ರಿಕಲ್ಚರಲ್ ಆಫೀಸರುಗಳ ಮುಖಾಂತರ ಸಬ್ಸಿಡಿ ರೂಪದಲ್ಲಿ ಕೊಡಲಾಗಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ:—ಕಾಪುವಿನಲ್ಲಾಗಲೀ ಅಥವಾ ಮಂಗಳೂರಿನಲ್ಲಾಗಲೀ ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನ ಒಂದು ಬ್ರಾಂಚ್ ಸಹ ಇಲ್ಲವೇ?

ಶ್ರೀ ಕೆ. ಎಚ್. ಪಾಟೀಲ್:—ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನಿಂದ ಔಷಧಿಗಳನ್ನು ಬೆಂಗಳೂರಿನಲ್ಲಿರುವವರೂ ಪಡೆಯಬಹುದು. ಮಂಗಳೂರಿನವರೂ ಸಹಾ ಪಡೆಯಬಹುದು. ಒಂದೇ ಕಡೇ ಬ್ರಾಂಚ್ ತೆಗೆಯಬೇಕೆಂದಿಲ್ಲ. ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ ಈಗಿನ ಸರ್ಕಾರದ ಉದ್ದೇಶ, ಎಲ್ಲಾ ಕಡೆಗಳಲ್ಲಿಯೂ ಇದಕ್ಕೆ ಸಂಬಂಧಪಟ್ಟಹಾಗೆ ಬ್ರಾಂಚ್‌ಗಳನ್ನು ತೆಗೆಯಬೇಕೆಂದಿದೆ. ಅದಕ್ಕೆ ಕಾಲಾವಕಾಶ ಬೇಕು.

ಶ್ರೀ ಎ. ಜಿ. ಕೊಡಗಿ:— ಇದರಿಂದ ಒಂದನೆಯ ಬೆಳೆಗೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು ತಿಳಿದು ಬಂದಿದೆ. ಆ ಬೆಳೆಯಲ್ಲಿ ಎಷ್ಟು ಹಾನಿಯಾಗಿದೆ ಎಂಬ ಬಗ್ಗೆ ಕರಾರುವಾಕ್ಕಾಗಿ ಏನಾದರೂ ಒಂದು ರಿಪೋರ್ಟ್ ಸರ್ಕಾರಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್:—ಇವತ್ತಿನವರೆಗೂ ಅದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎಲ್. ಹನುಮೇಗೌಡ. ಹಿಂದೆ ತಾಲ್ಲೂಕುಬೋರ್ಡಿನಿಂದ ವ್ಯವಸಾಯಗಾರರಿಗೆ ಸಬ್ಸಿಡಿ ರೇಟಿನಲ್ಲಿ ಈ ಔಷಧಿಗಳು ವಿತರಣೆಯಾಗುತ್ತಿತ್ತು. ಇತ್ತೀಚೆಗೆ ಅದನ್ನು ತಾಲ್ಲೂಕು ಬೋರ್ಡಿನವರು ಕೊಡುವುದನ್ನು ನಿಲ್ಲಿಸಿದ್ದಾರೆ. ಇದರಿಂದ ಬಡವರಿಗೆ ಹಾಗೂ ರೈತರಿಗೆ ಔಷಧಿಗಳು ಕಡಿಮೆ ದರದಲ್ಲಿ ಸಿಗದೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ತಾಲ್ಲೂಕು ಬೋರ್ಡಿನವರು ಅದನ್ನು ಸಬ್ಸಿಡಿ ರೂಪದಲ್ಲಿ ಕೊಡುವುದಕ್ಕೆ ಪ್ರಯತ್ನಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್:—ಮಂಗಳೂರಿನಲ್ಲಿ ತಾಲ್ಲೂಕು ಬೋರ್ಡಿನವರು ಸಬ್ಸಿಡಿ ರೂಪದಲ್ಲಿ ಕೊಡುವುದು ಬೇಡವೆಂದು ನಾನು ಹೇಳಲಿಲ್ಲ. ಸರ್ಕಾರದವರು ಕೊಡತಕ್ಕದ್ದನ್ನು ನಿಗದಿ ಮಾಡಿದ್ದಾರೆ. ಆದರೆ ತಾಲ್ಲೂಕು ಬೋರ್ಡಿನವರು ಹೆಚ್ಚು ಸಬ್ಸಿಡಿ ಕೊಟ್ಟರೆ, ನಾವು ಬೇಡವೆಂದು ಹೇಳುವುದಿಲ್ಲ. ತಾಲ್ಲೂಕು ಬೋರ್ಡಿನವರು ಹೆಚ್ಚಿಗೆ ಕೊಡಬೇಕೆಂದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದ್ದರೆ ಕೇಂದ್ರ ಸರ್ಕಾರಕ್ಕೆ ಅದಕ್ಕಾಗಿ ಮನವಿ ಮಾಡಲಾಗುವುದು. ಆ ಮನವಿಗೆ ಅಲ್ಲಿಂದ ಸಮ್ಮತಿ ಸಿಕ್ಕಿದರೆ ಸಬ್ಸಿಡಿ ಕಂಟಿನ್ಯೂ ಮಾಡುತ್ತೇವೆ. ಇಲ್ಲದಿದ್ದರೆ ಬಂದ್ ಮಾಡುತ್ತೇವೆ.

UNAUTHORISED ARRACK SHOPS OF UDIPI TALUK

(218) SRI B. BHASKARA SHETTY (Kaup).—

Will the Chief Minister be pleased to state.—

(*a*) the number of unauthorised arrack shops opened by the arraok contractors of Udipi taluk in their taluks ;

(*b*) whether any complaints have been received by Government in thif behalf :

(*c*) if so, the number of times the conoerned authorities raided the said shops and the number of cases filed against them in this behalf ;

(*d*) whether it has come to the notice of the government that the unauthorised shops are being opened repeatedly inspite of the raids conducted by the Excise Departmental Officers ;

(*e*) if so, the action taken by Government to prevent this ?

SRI K.H. PATIL. (Minister for Agriculture and Forets) [on behalf of SRI D. DEVARAJ URS (Chief Minister)].—

(*a*) The contractors of the year 1972-73 have not opened any such shops.

(*b*) Some complaints were received.

(*c*) Where the complaints were received investigation has been done, after conducting the raids 3 to 4 times. But nowhere it is found that the contractors have opened the arrack shops unauthorisedly.

(*d*) The question done not arise.

(*e*) The question does not arise.

ಶ್ರೀ ಬಿ. ಭಾಸ್ಕರಶೆಟ್ಟಿ.— (ಅ)ಗೆ ಉತ್ತರವಾಗಿ ಅನಧಿಕೃತ ಶರಾಬು ಅಂಗಡಿಗಳನ್ನು ತಗೆದಿಲ್ಲವೆಂದು ಹೇಳಿದಿರಿ. ನಾನು ಈ ಸಭೆಯ ಒಬ್ಬ ಜವಾಬ್ದಾರಿಯುತವಾದ ಸದಸ್ಯ ನನ್ನ ಮನೆಯ ಸ್ವಲ್ಪ ದೂರದಲ್ಲಿಯೇ ಒಂದು ಅನಧಿಕೃತ ಶರಾಬು ಅಂಗಡಿಯನ್ನು ಇಟ್ಟಿದ್ದಾರೆ. ಮೂರು-ನಾಲ್ಕು ಸಾರಿ ೧೫ ಬಾಟಲ್‌ಗಳಷ್ಟು ಶರಾಬನ್ನು ನನ್ನ ಎದುರಿಗೆ ತಂದಿದ್ದಾರೆ. ಇದರ ಬಗ್ಗೆ ತಮಗೆ ಸರಿಯಾದ ಅಂಶಗಳನ್ನು ತರಿಸಿಕೊಟ್ಟರೆ, ಸಂಬಂಧಪಟ್ಟ ಆಫೀಸರನ್ನು ವಿಚಾರಣೆಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿರಾ.